ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರ, ವಾರ್ತಾ, ಮತ್ತು ಪ್ರವಾಸೋದ್ಯಮ ಸಚಿವರು).—

ಅಧ್ಯಕ್ಷರೇ, ಪ್ರಸ್ತಾವ ಏನೆಂದರೆ, ''ಗರ್ಭಿಣಿ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ,

''ಗರ್ಭಿಣಿ ಇಸವಿಯ ಕರ್ನಾಟಕ ಸ್ಥಳೀಯ ಸಂಸ್ಥೆಗಳ ಕಾನೂನು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದುವರೆಸೋಣ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ ನನ್ನ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ರೆಡಿಯಾಗಿದ್ದಾರೆ. ಅವಕಾಶ ಕೊಟ್ಟರೆ ನಾನು ಮಾನ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳುವುದಕ್ಕೆ ನನ್ನ ವಿರೋಧವೇನು ಇಲ್ಲ. ಇಲ್ಲಿ ಇರತಕ್ಕಂಥ ಪ್ರಶ್ನೆ ಏನೆಂದರೆ ಅನೇಕ ಜನ ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಕಾತುರದಿಂದ ಇದ್ದಾರೆ. ಇನ್ನು ಎರಡನೆಯದು ರೈತರ ಬಗ್ಗೆ ಮುಖ್ಯವಾದ ವಿಷಯವನ್ನು ಚರ್ಚೆ ಮಾಡಲು ಇವತ್ತು ನಾಲ್ಕು ಗಂಟೆ ಸಮಯವನ್ನು ತಾವು ಕೊಟ್ಟಿದ್ದೀರಿ ಆದಕ್ಕೆ ನಮಗೆ ಸಮರ್ಪಕವಾದ ಉತ್ತರ ಸಿಗಬೇಕಾಗುತ್ತದೆ. ಅದಕ್ಕೆ ತಾವೊಂದು ಸಮಯ ನಿಗದಿ ಮಾಡಿ ಅದಷ್ಟು ಬೇಗ ಎಲ್ಲಾ ಕಾರ್ಯಕ್ರಮಗಳನ್ನು ಮುಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನುಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಬೈರೇಗೌಡರು ಕಳುಹಿಸಿಕೊಟ್ಟಿರತಕ್ಕಂಥ ವಿಚಾರ ರೈತರ ವಿಚಾರ. ಇದು ಬಹಳ ಪ್ರಮುಖವಾದ ವಿಚಾರವಾಗಿದೆ. ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಎಲೆಕ್ಟ್ರಿಸಿಟಿ ಪ್ರಾಬ್ಲಂ ಬಹಳ ವರಸ್ಟ್ ಆಗಿದೆ. ಅದೂ ಕಳೆದ ೫-೬ ತಿಂಗಳುಗಳಿಂದ. ಆದ್ದರಿಂದ ದಯವಾಡಿ ಇದನ್ನು ತೆಗೆದುಕೊಳ್ಳಬೇಕೆಂದು ನಾನು ಆಗ್ರಹಪೂರ್ವವಾಗಿ ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಹೇಳಿದ್ದು ಒಂದು ಸಮಯ ನಿಗದಿ ಮಾಡಿ ಎಂದು, ಅದಕ್ಕೆ ನನ್ನ ವಿರೋಧ ಇಲ್ಲ.

ಗಮನ ಸೆಳೆಯುವ ಸೂಚನೆಗಳು

ರಾಜ್ಯದಲ್ಲಿ ವಿದ್ಯುತ್ ಕೊರತೆಯಿಂದ ಗ್ರಾಹಕರಿಗೆ ಮತ್ತು ವ್ಯವಸಾಯಗಾರರಿಗೆ ತೊಂದರೆಯಾಗಿರುವುದು

ಶ್ರೀ ಸಿ ಬೈರೇಗೌಡ.—ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಸರಬರಾಜಿನಲ್ಲಿರತಕ್ಕಂಥ ಅಡೆತಡೆಗಳನ್ನು ಎಲ್ಲಾ ಗ್ರಾಹಕರಿಗೂ ಪ್ರಮುಖವಾಗಿ ವ್ಯವಸಾಯಗಾರರಿಗೆ ತೊಂದರೆಯಾಗಿರುವ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಸಿ. ಭೈರೇಗೌಡ.—ಸ್ವಾಮಿ ಹೇಳಿಕೆಯು ಕಾಪಿ ಬಂದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ ಸರ್ಕಾರ ನಿದ್ರಾವಸ್ಥೆಯಲ್ಲಿದೆಯೇ ಹೇಗೆ? ತಮ್ಮ ಇಲಾಖಾಧಿಕಾರಿಗಳು ಏನು ಮಾಡುತ್ತಿದ್ದಾರೆ? ಮಂತ್ರಿಗಳ ಸಿಬ್ಬಂದಿ ವರ್ಗದವರು ಏನು ಮಾಡುತ್ತಿದ್ದಾರೆ?

ಅಧ್ಯಕ್ಷರು.—ಅದಕ್ಕೆ ನಾನು ಹೇಳಿದೆಂದು ಇದನ್ನು ಮಧ್ಯಾಹ್ನ ತೆಗೆದುಕೊಳ್ಳೋಣವೆಂದು.

ಶ್ರೀ ಸಿ. ಬೈರೇಗೌಡ.—ಸ್ವಾಮಿ ಸರ್ಕಾರದ ಹೇಳಿಕೆ ತಯಾರಾಗಿದೆ.

ಶ್ರೀ ವಾಟಾಳ್‌ನಾಗರಾಜ್.—ಸ್ವಾಮಿ ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಉತ್ತರ ಹೇಳು ತಾವು ಕನ್ನಡದಲ್ಲಿ ಬಹಳ ಸೊಗಸಾಗಿ ಮಾತನಾಡುತ್ತೀರಿ. ನನಗೆ ತಮ್ಮ ಮಾತು ಕೇಳಿ ಸಂತೋಷವಾಗುತ್ತದೆ. ಆದರೆ ಸರ್ಕಾರಕ್ಕೆ ಏನಾಗಿದೆ? ನಾಚಿಕೆಗೇಡು ಇದು.

ಅಧ್ಯಕ್ಷರು.—ಇನ್ನು ಆದಷ್ಟು ಹೇಳಿಕೆಗಳು ಗಮನ ಸೆಳೆಯುವ ಸೂಚನೆಗಳು ಮಂತ್ರಾವುದ್ದು ಆಗಲಿ ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿದ್ದರೆ ಒಳ್ಳೆಯದು. ಅದರಲ್ಲೂ ಕನ್ನಡದಲ್ಲಿ ಇದ್ದರೆ ಇನ್ನೂ ಅನುಕೂಲವಾಗುತ್ತದೆ ಇದು ನನ್ನ ಸೂಚನೆ. ಈಗಾಗಲೇ ಮಾನ್ಯ ಸಚಿವರು ನಿಂತಿದ್ದಾರೆ. ಸಭೆಯ ಕಾರ್ಯ ಕಲಾಪಗಳನ್ನು ಮುಂದುವರೆಸೋಣ.

ಶ್ರೀ ವಾಟಾಳ್‌ನಾಗರಾಜ್:—ಅವರು ಇನ್ನು ಪ್ರಾರಂಭ ಮಾಡಿಲ್ಲ.

ಅಧ್ಯಕ್ಷರು.—ಬೇರೆ ಕಾಪಿ ಇಲ್ಲವಲ್ಲ.

ಶ್ರೀ ವಾಟಾಳ್‌ನಾಗರಾಜ್.—ನಾಚಿಕೆಗೇಡು, ರಾಜ್ಯಭಾಷೆ ಕನ್ನಡವಾಗಿದ್ದು, ಕನ್ನಡದಲ್ಲಿ ಕಾಪಿ ಇಲ್ಲವೆಂದರೆ ನಾಚಿಕೆಗೇಡು.

ಶ್ರೀ ಸಿ. ಬೈರೇಗೌಡ.—ಸ್ವಾಮಿ ಅಧ್ಯಕ್ಷರೇ ತಾವು ನನ್ನ ರಕ್ಷಣೆಗೆ ಬರಬೇಕು. ಮಾನ್ಯಮಂತ್ರಿಗಳು ನಿಂತಿದ್ದಾರೆ. ಅವರು ಏನು ಹೇಳುತ್ತಿದ್ದಾರೆನ್ನುವುದೇ ನನಗೆ ಗೊತ್ತಿಲ್ಲ. ಅರ್ಥವಾಗುತ್ತಿಲ್ಲ. ಈ ಸದನದಲ್ಲಿ ಒಂದು ಸಾರಿ ಎದ್ದು ಎದ್ದು ನಿಂತು ಮಾತನಾಡುವುದು ಸರಿ ಎಲ್ಲಾ ಸಂದರ್ಭದಲ್ಲಿ ಈ ರೀತಿಯಾದರೆ ನಾವೇನು ಮಾಡುವುದು. ಏನು ಅರ್ಥವಾಗಬೇಕು. ಆದ್ದರಿಂದ ತಾವು ನನ್ನ ರಕ್ಷಣೆಗೆ ಬರಬೇಕಾಗುತ್ತದೆ.

ಅಧ್ಯಕ್ಷರು.—ಈಗ ಸದನ ನನ್ನ ರಕ್ಷಣೆಗೆ ಬರಬೇಕಾಗುತ್ತದೆ.

SRI M. RAJASHEKARAMURTHI (Hon. Minister for Finance) (on behalf of Chief Minister).—Sir In order to improve the quality of Power supply in the state, the Karnataka Electricity Board has taken to excute Saveral remedial measures such as providing high voltage substations, capacitor banks, express lines, reinforcing the power lines, etc. In some of the areas these remedial measures have been effected and there has been improvement in the quality of service. These works are yet to be carried out in most of the are and it is programmed to do it in a phased manner, keeping in view tothe financia resources of the Board. when the execution of these remedial measures are completed, it is expected to achieve the improvement in the quality of power supply.

During the current year 1989-90 it is targeted to give service to 40, 000 I.P.Sets. By the end of November 1989, 21.564 I.P.sets having been electrified. The full target for the current year will be achieved by the end of March 1990. Even after servicing 21.564 I.P.sets by end of November 1989, there were still 62,293 applications pending which is one and half times more than target fixed for the current year. As the target for the year has been fixed on the basis of the financial resources of the Board, it is rather difficult to go beyond the target to service all the pending applications which are over 62,000.

ಶ್ರೀ ಸಿ. ಬೈರೇಗೌಡ.—ಸನ್ಮಾನ್ಯ ಅಧ್ಯಕ್ಷರೇ, ಈ ಸದನದ ಒಂದು ಸಮಿತಿಯನ್ನು ರಚಿಸಿ ಮಾಡಿ ರೈತರುಗಳಿಗೆ ಆಗುತ್ತಿರತಕ್ಕಂಥ ತೊಂದರೆಗಳ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಡಬೇಕೆಂಬ ದೃಷ್ಟಿಯಿಂದ

ಈ ವಿಷಯವನ್ನು ಈ ಸಭೆಯಂ ಮತ್ತು ತಮ್ಮ ಗಮನಕ್ಕೆ ತಂದದ್ದು ಕಾರಣ ಏನೆಂದರೆ, ಹಿಂದಿನ ವಿಧಾನಸಭೆಯಲ್ಲಿ ಸದನದ ಸಮಿತಿ ಕೂಡ ರಚನೆಯಾಗಿತ್ತು. ಆ ಸಮಿತಿಯವರು ಕೆಲವು ಮಾಹಿತಿಗಳನ್ನು ಕೂಡ ಕೊಟ್ಟಿದ್ದರು. ಆ ಮಾಹಿತಿಗಳ ಆಧಾರದ ಮೇಲೆ ಸುಮಾರಂ ೧೭೦ ಕೋಟಿ ರೂಪಾಯಿಯಷ್ಟು ಹಣವನ್ನು ವಿದ್ಯುಚ್ಛಕ್ತಿ ಮಂಡಳಿಯವರಿಗೆ ಸರ್ಕಾರದವರು ಕೊಟ್ಟರೆ ಅದನ್ನು ಸರಿಪಡಿಸಬಹುದು. ಈ ಹೇಳಿಕೆಯಲ್ಲಿ ೪೨ಸಾವಿರ ಐ.ಪಿ. ಸೆಟ್ಟುಗಳಿಗೆ ಪವರ್ ಕೊಡುವುದಕ್ಕೆ ಸಾಧ್ಯವೆಂದು ಹೇಳಲಾಗಿದೆ. ನಿಜವಾಗಿ ಬೇಡಿಕೆ ಇರುವುದಂ ಒಂದಂ ಲಕ್ಷಕ್ಕೂ ಮೇಲ್ಪಟ್ಟು ಅರ್ಜಿಗಳನ್ನು ಸಲ್ಲಿಸಿ ಎರಡೂ ವರ್ಷಗಳಿಗೂ ಮೇಲ್ಪಟ್ಟಾಗಿದ್ದರೂ ಐ.ಪಿ. ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಟ್ಟಿಲ್ಲ. ಮಾನ್ಯ ಅಧ್ಯಕ್ಷರೇ, ತಾವು ನೀರಾವರಿ ಪ್ರದೇಶದಿಂದ ಬಂದಿರತಕ್ಕವರು, ಇದರ ಅನುಭವ ತಮಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಕೋಲಾರ, ಬೆಂಗಳೂರು ಮತ್ತು ತುಮಕೂರಂ ಜಿಲ್ಲೆಗಳಲ್ಲಿ ನೀರಾವರಿ ಸೌಕರ್ಯಗಳು ಇಲ್ಲ. ಈ ಜಿಲ್ಲೆಗಳಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ನೀರಾವರಿ ಮಾಡಬೇಕಾಗಿದೆ. ಕೊಳವೆ ಬಾವಿಗಳನ್ನು ೩೦೦ ಅಡಿ, ೫೦೦ ಅಡಿ, ೧೦೦೦ ಅಡಿಗಳ ಆಳದವರೆಗೂ ತೋಡಿಸಿ ನೀರು ತರಬೇಕಾಗುತ್ತದೆ ಒಂದು ಸಾರಿ ಕೊಳವೆ ಬಾವಿಯನ್ನು ಹಾಕಿಸಿದರೆ, ವೈಜ್ಞಾನಿಕವಾಗಿ ೩ ತಿಂಗಳೊಳಗೆ ನೀರನ್ನು ಉಪಯೋಗಿಸಬೇಕು. ಇಲ್ಲದೇ ಹೋದರೆ ಕೊಳವೆ ಬಾವಿ ನಿಷ್ಪ್ರಯೋಜಕವಾಗುತ್ತದೆ. ಆಮೇಲೆ ನೀರು ಬರುವುದಿಲ್ಲ. ಕೊಳವೆ ಬಾವಿಗಳನ್ನು ತೋಡಿಸಿ ವಿದ್ಯುಚ್ಛಕ್ತಿ ಕನಕ್ಷನ್ ಕೊಡದೆ ಇರುವುದರಿಂದ ಕೊಳವೆ ಬಾವಿ ಹಾಕಿಸುವುದಕ್ಕಾಗಿ ಸಾಲ ಮಾಡಿರುವ ರೈತರುಗಳು ತಮ್ಮ ಮನೆ ಮಠ, ಆಸ್ತಿಗಳನ್ನು ಕಳೆದುಕೊಳ್ಳತಕ್ಕಂಥ ಪರಿಸ್ಥಿತಿ ಇದೆ. ಒಂದು ಕೊಳವೆ ಬಾವಿಗೆ ಅರ್ಜಿ ಹಾಕಿ ಎರಡೂವರೆ ವರ್ಷಗಳಾದರೂ ವಿದ್ಯುಚ್ಛಕ್ತಿ ಕನಕ್ಷನ್ ಕೊಡದಿದ್ದರೆ ರೈತರ ಗತಿ ಏನಾಗಬೇಕು? ಬ್ಯಾಂಕುಗಳ ಮೂಲಕ ತೆಗೆದುಕೊಂಡ ಸಾಲಕ್ಕೆ ಆಸ್ತಿಗಳನ್ನು ಮಾರಾಟ ಮಾಡಿದರೂ ಬಡ್ಡಿಗಳನ್ನು ಕಟ್ಟುವುದಕ್ಕಾಗುವುದಿಲ್ಲ. ಆದ್ದರಿಂದ ಈ ವಿಷಯವನ್ನು ಕೂಲಂಕಷವಾಗಿ ವಿಮರ್ಶೆ ಮಾಡುವುದಕ್ಕೆ ಮತ್ತು ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಒಂದು ಸದನದ ಸಮಿತಿಯನ್ನು ರಚನೆ ಮಾಡಬೇಕು. ಹಿಂದಿನ ವಿಧಾನ ಸಭೆಯಲ್ಲಿ ಒಂದು ಸದನ ಸಮಿತಿಯನ್ನು ಮಾಡಲಾಗಿತ್ತು. ಈಗ ಮಾನ್ಯ ಮಂತ್ರಿಯವರು ಸದನದ ಸಮಿತಿ ರಚನೆ ಮಾಡುವುದಕ್ಕೆ ಒಪ್ಪಿಕೊಂಡು ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತು ಸದನದ ಸಮಿತಿಯನ್ನು ರಚನೆ ಮಾಡುವುದಕ್ಕೆ ಮುಂದಾಗಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಐ.ಪಿ.ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಬೇಡಿ ಒಂದೂವರೆ ಲಕ್ಷಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ನೀರಾವರಿ ಪ್ರದೇಶಗಳಲ್ಲಿ ಐ ಪಿ. ಸೆಟ್‌ಗಳಿಗೆ ಬೇಡಿಕೆ ಕಡಿಮೆ ಇದೆ. ನಮ್ಮ ಕೋಲಾರ, ಬೆಂಗಳೂರು ಜಿಲ್ಲೆಗಳಲ್ಲಿ ಮಳೆ ಬಿಟ್ಟರೆ ನಮಗೆ ಬೇರೆ ನೀರಾವರಿ ಆಶ್ರಯ ಇಲ್ಲ.

೨೪ ಗಂಟೆಯೂ ಆಕಾಶವನ್ನೇ ನೋಡಬೇಕು. ಆಕಾಶ ನೋಡಿಕೊಂಡು, ವ್ಯವಸಾಯ ಮಾಡುವವರು ನಾವು ರೈತರು ನೀರಿಗಾಗಿ ೭೦೦–೮೦೦ ಅಡಿ ಯವರೆಗೆ ಬಾವಿಯನ್ನು ತೆಗೆದರೂ ಕೂಡ ನೀರಿಲ್ಲ. ಈ ದೃಷ್ಟಿಯಿಂದ ನಮ್ಮ ಭಾಗವನ್ನು ಪ್ರತ್ಯೇಕ ರಾಜ್ಯವನ್ನು ಆಗಿ ಮಾಡಿ ಎಂದು ಕೇಳುವ ಸ್ಥಿತಿ ಬರುತ್ತಿದೆ. ಈ ಪ್ರದೇಶದ ರೈತರು ಆ ರೀತಿ ಕೆಳಬೇಕಾಗುತ್ತದೆ. ನೀವು ಈ ರೀತಿ ನಮಗೆ ವಿದ್ಯುತ್ತನ್ನು ಒದಗಿಸದೇ ಹೋದರೆ ನಾವು ಈ ರೀತಿ ಕೇಳಬೇಕಾಗುತ್ತದೆ ಅಪರ್ ಕೃಷ ಆಗಲೀ, ಕಾವೇರಿ ಆಗಲಿ ಆಗಬೇಕು ಎಂದು ಹೇಳುವವರು ನಾವು, ಆದರೆ ನಮ್ಮಲ್ಲಿ ನೀರಾವರಿಗೆ ಅವಕಾಶ ಇಲ್ಲ, ಆ ಭಾಗದ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಆದ್ಯತೆ ಕೊಡಬೇಕು. ಒಂದು ಕಡೆ ೭೦೦–೮೦೦ ಕೋಟಿ ರೂಪಾಯಿಯನ್ನು ಖರ್ಚು ಮಾಡುವಾಗ ಕೇವಲ ೧೦೦ ಕೋಟಿ ರೂಪಾಯಿಯನ್ನು ಖರ್ಚು ಮಾಡಿ, ಕೆಲವು ಕೆಲಸಗಳನ್ನಾದರೂ ಮಾಡಿಸದಿದ್ದರೆ ನಾವು ಸುಮ್ಮನಿರಲು ಸಾಧ್ಯವಿಲ್ಲ. ಎಂದು ಎರಡೂ ವರ್ಷಗಳಿಂದ ರೈತರಿಗೆ ಕರೆಂಟ್ ಕೊಡದೇ ಇರತಕ್ಕ ಪರಿಸ್ಥಿತಿ ನಮ್ಮ ಭಾಗದ ರೈತರಿಗೆ ಇದೆ. ಅವರ ಗತಿ ಏನಾಗುತ್ತದೆ ಎಂಬುದನ್ನು ಯೋಜನೆ ಮಾಡಬೇಕು. ಅವರು ಸಾಲಸೋಲ ಮಾಡಿ, ಬಾವಿ ತೋಡಿಸಿರುತ್ತಾರೆ. ಅವರಿಗೆ ನೀವು ವಿದ್ಯುತ್ತನ್ನು ಒದಗಿಸದೇ ಹೋದರೆ ಅವರ ಗತಿ ಏನು? ಇದರ ಬಗ್ಗೆ ಸಮರ್ಪಕವಾದ ಉತ್ತರವನ್ನು ಸರ್ಕಾರ ಇದರಲ್ಲಿ ಕೊಟ್ಟಿಲ್ಲ. ರೈತರಿಗೆ ಯಾವ ವಿಧವಾದಂಥ ಪರಿಹಾರವನ್ನು ಕೊಟ್ಟಿಲ್ಲ. ೪೦೦ ಟ್ಟಿಲ್ಲರೆ ವೋಲ್ಟೆಜ್ ಇರಬೇಕು, ಆದರೆ ನಮ್ಮ ರೈತರಿಗೆ ೧೮೦–೨೦೦ರವರೆಗೆ ವೋಲ್ಟೆಜ್ ಇರತಕ್ಕ ಕರೆಂಟು ಕೊಡುತ್ತಿದ್ದಾರೆ. ಕನಿಷ್ಟ ೩೦೦ ವೋಲ್ಟೆಜು ಇರಲೇಬೇಕು ಇಲ್ಲದಿದ್ದರೆ ಸಬ್‌ಮರ್ಸಿಬಲ್ ಪಂಪು ಕೆಲಸಮಾಡುವುದಿಲ್ಲ. ೨–೩ ಗಂಟೆಯೂ ಕರೆಂಟ್ ಕೊಡುವುದಿಲ್ಲ ಅಲ್ಲಿ ಭೀಕರ ಪರಿಸ್ಥಿತಿ ಇದೆ. ಹಿಂದೆ ಕೂಡ ನಮ್ಮ ಸರ್ಕಾರ ಇದ್ದಾಗ ಇದೇ ಮಾತನ್ನು ಹೇಳಿದ್ದೇನೆ. ಆಗಲೂ ಸರಿಪಡಿಸಲು ಆಗಲಿಲ್ಲ. ಪ್ರತಿದಿವಸ ಅಲ್ಲಿ ಪವರ್ ಕಟ್ ಇದೆ. ಇವರು ೧೭೦–೧೭೬ ಜನ ಬಂದಿದ್ದಾರೆ. ಇವರು ಸರಿಪಡಿಸುತ್ತಾರೆಂದು ತಿಳಿದುಕೊಂಡಿದ್ದೆ ಆದರೆ ಈಗ

ನೋಡಿದರೆ ಹಿಂದೆ ಇದ್ದುದ್ದಕ್ಕಿಂತ ಹೊಲಸಾಗಿರತಕ್ಕ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ನಮ್ಮ ಕೆಲವು ಜಿಲ್ಲೆಗಳಲ್ಲಿ ತೀವ್ರವಾದ ಲಾಅಂಡ್ ಆರ್ಡರ್ ಸಿಚ್ಯುಯೇಷನ್ ಇದೆ. ಇದೇ ರೀತಿ ಮುಂದುವರೆದರೆ ಪರಿಸ್ಥಿತಿ ಇನ್ನೂ ಗಂಭೀರವಾಗುತ್ತದೆ. ಸರ್ಕಾರವು ಬಹಳ ಗಂಭೀರಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ರೈತರ ತಾಳ್ಮೆಯು ಪಲಾಯನಗೈದು ಹೋಗಿದೆ. ಅವರ ತಾಳ್ಮೆಯ ಭಂಡಾರ ಮುಗಿದುಹೋಗಿದೆ. ಅದು ಖಾಲಿಯಾಗಿದೆ. ಸರ್ಕಾರ ಇದನ್ನು ಗಮನಿಸುತ್ತದೆಯೆಂದು ತಿಳಿದುಕೊಂಡಿದ್ದೇನೆ. ಈಗ ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ ಸರ್ಕಾರದಿಂದ ೧೭೦ ಕೋಟಿ ರೂಪಾಯಿಗಳನ್ನು ಕೊಟ್ಟರೆ ಸಾಧ್ಯವೆಂಬ ಮಾತನ್ನು ಕೆ.ಇ.ಬಿ. ಯವರು ಹೇಳಿದ್ದಾರೆ. ಕೆ.ಇ.ಬಿ. ಯಲ್ಲಿ ಹಣವಿಲ್ಲ. ನಾವು ಅಧಿಕಾರಿಗಳ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದೇವೆ. ಹಣವನ್ನು ಓದಗಿಸಿಕೊಟ್ಟರೆ ನಾವು ಕೆಲಸ ಮಾಡಲು ಅನುಕೂಲವಾಗುತ್ತದೆಂದು ಅವರು ಹೇಳುತ್ತಾರೆ. ಎರಡು-ಎರಡೂವರೆ ವರ್ಷ ಸರ್ವಿಸ್ ಕೊಡದಿದ್ದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ೩-೬ ತಿಂಗಳಿನಲ್ಲಿ ಸರ್ವೀಸ್ ಕೊಡಬೇಕಾಗಿತ್ತು. ಬಯೇಲು ಸೀಮೆಯಲ್ಲಿರತಕ್ಕ ಜಿಲ್ಲೆಗಳಲ್ಲಿ ೩-೬ ತಿಂಗಳಿನಲ್ಲಿ ಎಷ್ಟೆ ಅರ್ಜಿಗಳಿದ್ದರೂ ಅಷ್ಟಕ್ಕೂ ವಿದ್ಯುತ್ ಕೊಡುವ ಕೆಲಸ ಆಗಬೇಕು.

ಶ್ರೀ ಎಂ. ಪಿ. ವೆಂಕಟೇಶ್.—೩-೪ ವರ್ಷಗಳಿಂದ ಪಂಪ್‌ಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿಲ್ಲ. ರೈತರಿಗೆ ಸಾಲ ಕೊಡುವಾಗ ವಿದ್ಯುಚ್ಛಕ್ತಿ ಮಂಡಲಿಯವರು ವಿದ್ಯುತ್ತನ್ನು ಕೊಡುತ್ತೇವೆಂದು ಸರ್ಟಿಫಿಕೇಟ್ ಕೊಡುತ್ತಾರೆ. ರೈತರು ಸಾಲ ತೆಗೆದುಕೊಂಡು ೨ ಕಂತುಗಳಲ್ಲಿ ಹಣವನ್ನು ತೀರಿಸಬೇಕು; ಅವರು ಪಂಪ್‌ಸೆಟ್ಟುಗಳನ್ನು ಹಾಕಿಸುತ್ತಾರೆ. ಆದರೆ ಕೆ.ಇ.ಬಿ. ಯವರು ಸರ್ವಿಸ್ ಕೊಟ್ಟಿಲ್ಲ. ಕೆಇಬಿ ಯಲ್ಲಿ ಕೇಳಿದರೆ ಸೀನಿಯಾರಿಟಿಯೆಂದು ಹೇಳುತ್ತಾರೆ. ೪ ವರ್ಷದಿಂದ ಕೆಲವು ಕಡೆ ಕರೆಂಟ್ ಕೊಟ್ಟಿಲ್ಲ. ಕೆಲವು ಕಡೆ ಬಾವಿ ಬಿದ್ದುಹೋಗಿದೆ ಪಂಪ್‌ಸೆಟ್ಟುಗಳು ಕಿತ್ತೋಗಿದೆ. ಬ್ಯಾಂಕಿನವರು ಹರಾಜು ಮಾಡಲು ಹೋಗುತ್ತಿದ್ದಾರೆ. ಬೆಳೆ ಇಲ್ಲದೆ ರೈತರು ಊರುಬಿಟ್ಟು ಹೋಗುತ್ತಿದ್ದಾರೆ. ಹಿಂದಿನ ಸರ್ಕಾರ ಮಾಡಿಲ್ಲವೆಂದು ನಾವು ಹೇಳುತ್ತೀರಿ. ಈಗ ನೀವು ಬಂದಿದ್ದೀರಿ. ಆದೂ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದೀರಿ ಎಷ್ಟು ಪಂಪ್‌ಸೆಟ್ಟುಗಳಿಗೆ ಅಷ್ಟಕ್ಕೂ ಸರ್ವೀಸ್ ಕೊಡುತ್ತೇವೆಂದು ಹೇಳಿ ಬ್ಯಾಂಕುಗಳವರು ಸಾಲಗಳನ್ನು ವಸೂಲಿ ಮಾಡುತ್ತಿದ್ದಾರೆ. ಅದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಬೇಕು. ಬ್ಯಾಂಕಿನವರು ರೈತರ ಮನೆಗಳಿಂದ ಪಾತ್ರೆಗಳನ್ನು ಎಲ್ಲಾ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಬಾವಿ ಸಾಲಗಳನ್ನು ತೆಗೆದುಕೊಂಡಿರುವವರು ಸಾಲವನ್ನು ಕಟ್ಟಿದ್ದರೆ ಅದನ್ನು ತಡೆಹಿಡಿಯಬೇಕು ಅವರ ಪಂಪ್‌ಸೆಟ್ಟುಗಳಿಗೆ ಕನೆಕ್ಷನ್ ಕೊಡುವವರೆಗೆ ಈ ಸಾಲ ವಸೂಲಿಯನ್ನು ತಡೆಹಿಡಿಯಬೇಕು. ವಿದ್ಯುಚ್ಛಕ್ತಿ ಮಂಡಲಿಯವರು ಕೂಡಾ ಕಂಬ ಹಾಕಿದರೆ ಲೈನ್ ಹಾಕಿರುವುದಿಲ್ಲ ಇದನ್ನೆಲ್ಲಾ ಸರಿಪಡಿಸಬೇಕು. ಪಂಪ್‌ಸೆಟ್‌ಗಳಿಗಾಗಿ ಬ್ಯಾಂಕ್ ಸಾಲ ವಸೂಲಿ ಏನಾಗುತ್ತದೆ ಅದನ್ನು ನಿಲ್ಲಿಸಿ. ಸಾಲ ಕಟ್ಟಲಿಲ್ಲವೆಂದು ಬ್ಯಾಂಕ್‌ನವರು ರೈತರ ಪಾತ್ರೆಪಗಡಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ ಆದ್ದರಿಂದ ಪಂಪ್‌ಸೆಟ್ ಕನೆಕ್ಷನ್ ಕೊಟ್ಟಿರುವವರಿಗೆ ನಿಲ್ಲಿಸಿ. ವಿದ್ಯುಚ್ಛಕ್ತಿ ಮಂಡಲಿಯವರು ಸರಿಯಾಗಿ ಲೈನ್ ಹಾಕುವುದಿಲ್ಲ. ಎರಡು ಕಂಬ ಹಾಕಿದರೆ ಕನೆಕ್ಷನ್ ಕೊಡಬಹುದು, ಆದರೆ ಅವರು ಅಷ್ಟೂ ಮಾಡುವುದಿಲ್ಲ. ಎಷ್ಟೋ ಕಡೆ ಸರ್ವಿಸೇ ಇಲ್ಲ. ಆದ್ದರಿಂದ ದಯವಿಟ್ಟು ತಾವು ಏನು ರೈತರಿಗೆ ಬಾವಿ ಸಾಲ ಕೊಟ್ಟಿದ್ದೀರೋ ಅದನ್ನು ಕನೆಕ್ಷನ್ ಕೊಡುವವರೆಗೂ ಸಾಲ ವಸೂಲಿ ನಿಲ್ಲಿಸಬೇಕೆಂದು ಆದೇಶ ಕೊಟ್ಟು ಜೊತೆಗೆ ಪೆಂಡಿಂಗಿರುವ ಅರ್ಜಿಗಳು ಎಷ್ಟಿವೆಯೋ ಅದನ್ನು ಸ್ಯಾಂಕ್ಷನ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾವಿಂ ನಮ್ಮ ಕಡೆ.....

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಹಳ ಪ್ರಾಮುಖ್ಯವಾದ ವಿಷಯ ನನಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ಇಲ್ಲ, ಒಬ್ಬರಿಗೆ ಅವಕಾಶ ಕೊಟ್ಟರೆ ಇನ್ನೊಬ್ಬರಿಗೂ ಕೊಡಬೇಕು ಎಲ್ಲಾ ಜಿಲ್ಲೆಗಳಿಗೆ ಇದು ಸಂಬಂಧಿಸಿದ್ದಾದರೂ ಮಂತ್ರಿಗಳು ಕೋಲಾರದ ಬಗ್ಗೆ ಉತ್ತರ ಹೇಳುತ್ತಾರೆ.

† ಶ್ರೀ ಎಂ. ರಾಜಶೇಖರಮೂರ್ತಿ (ಮುಖ್ಯಮಂತ್ರಿಗಳ ಪರವಾಗಿ).—ಮಾನ್ಯ ಬೈರೇಗೌಡರು ಆಲ್ಲಿ ಕೋಲಾರದ ರೈತರಿಗೆ ಅನುಕಂಪ ತೋರಿಸುವುದು ಸರಿ ಎನ್ನಿ. ಅಲ್ಲಿನ ರೈತರು ದುರ್ಬೈಮ ಶಾಲಿಗಳು ಎನ್ನಬೇಕಾಗುತ್ತದೆ. ಕೋಲಾರದಲ್ಲಿ ಸಾಕಷ್ಟು ಮಳೆಯಾಗುವುದಿಲ್ಲ. ಮತ್ತೆ ಅಲ್ಲಿದೊಡ್ಡ ಜಲಾಶಯಗಳ ನಿರ್ಮಾಣವೂ ಇಲ್ಲ. ಇದರಿಂದ ನೀರು ಸರಬರಾಜು ಮಾಡುವ ಸೌಕರ್ಯವೂ ಇಲ್ಲ. ಈ ಎಲ್ಲ ದೃಷ್ಟಿಯಿಂದ ನೀರಾವರಿ ಸೌಲಭ್ಯ ಕೋಲಾರದಲ್ಲಿ ಕಡಿಮೆ ಆದ್ದರಿಂದ ರೈತರೇ ಕೋಲಾರದಲ್ಲಿ ಪಂಪ್‌ಸೆಟ್‌ಗಳನ್ನು ಹಾಕಿಕೊಂಡು ತನ್ಮೂಲಕ ವ್ಯವಸಾಯ ಮಾಡುತ್ತಿದ್ದಾರೆ. ನಿಮಗೆ ಗೊತ್ತಿರುವ ಹಾಗೆ ಇಡೀ ರಾಜ್ಯದಲ್ಲಿ ೬ ಲಕ್ಷ ೫೦ ಸಾವಿರ ಪಂಪ್‌ಸೆಟ್‌ಗಳಿದ್ದು ಕೋಲಾರವೊಂದರಲ್ಲೇ ೮೧ ಸಾವಿರ

ಸಾವಿರ ಇವ. ಮತ್ತು ಸಹಸ್ರಾರು ಅರ್ಜಿಗಳು ಇನ್ನೂ ಪೆಂಡಿಂಗಿವೆ ಇದು ಏನು ತೋರಿಸುತ್ತಿದೆ ಎಂದರೆ ಕೋಲಾರದಲ್ಲಿ ಇರಿಗೇಷನ್ ಪಂಪ್‌ಸೆಟ್‌ಗಳ ಮೂಲಕವೇ ಸಾಧ್ಯ ಎಂದು. ಆದರೆ ಏತಕ್ಕೆ ಎಲ್ಲಾ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕೊಡುತ್ತಿಲ್ಲ ಎಂದು ಕೇಳುತ್ತಿದ್ದಾರೆ. ಅದಕ್ಕೆ ಕಾರಣ ಇಷ್ಟೆ, ನಮ್ಮ ರಾಜ್ಯದಲ್ಲಿ ಇರತಕ್ಕ ವಿದ್ಯುತ್ ಏನಿದೆ ಕೇವಲ ೧೪ ಸಾವಿರ ಮಿಲಿಯನ್ ಯೂನಿಟ್ಸ್ ಆದರೆ ಬೇಡಿಕೆ ಸುಮಾರು ೧೮ ಸಾವಿರದಿಂದ ೨೦ ಸಾವಿರ ಮಿಲಿಯನ್ ಯೂನಿಟ್ಸ್ ಇದೆ. ಉತ್ಪನ್ನಕ್ಕೂ ಬೇಡಿಕೆಗೂ ಬಹಳ ಅಂತರ ಇದೆ. ಈ ಪರಿಸ್ಥಿತಿ ಉತ್ತಮಗೊಳ್ಳುವವರೆಗೂ ರೈತರಿಗೆ ವಿದ್ಯುತ್ ಒದಗಿಸಿ ಕೊಡುವುದು ಬಹಳ ಕಷ್ಟಕರವಾದ ಮಾತು. ಆದರೆ ಇದನ್ನು ತಿಳಿದುಕೊಂಡು ಸರ್ಕಾರ ಸುಮ್ಮನೆ ಕುಳಿತಿಲ್ಲ. ಕೋಲಾರದಲ್ಲಿ ಪರಿಸ್ಥಿತಿಯನ್ನು ಉತ್ತಮಪಡಿಸಬೇಕೆಂದು ಈಗ ದಾವಣಗೆರೆಯಿಂದ ಕೋಲಾರದವರೆಗೂ ಹೊಸ ಲೈನ್ ಹಾಕುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈಗಾಗಲೇ ದಾವಣಗೆರೆಯಿಂದ ರಾಯಚೂರು ವರೆಗೆ ಲಿಂಕ್ ಇದೆ.

೧೧.೧೫ ಎ. ಎಂ.

ಈ ತಿಂಗಳ ಕೊನೆಯೊಳಗೆ ಆ ಕೆಲಸ ಮುಗಿಯುತ್ತದೆ. ಕೋಲಾರದ ಜಿಲ್ಲೆಯಲ್ಲಿ ನಾಲ್ಕು ಸಬ್ ಸ್ಟೇಷನ್ಸ್‌ಗಳನ್ನು ಮಾಡಬೇಕೆಂದು ಇದ್ದೇವೆ. ಶ್ರೀನಿವಾಸಪುರ, ಮುಳಬಾಗಿಲು, ಬಂಗಾರು ಪೇಟೆ ಸಬ್ ಸ್ಟೇಷನ್ಸ್‌ಗಳನ್ನು ಮಾಡುವುದರಿಂದ ಸ್ವಲ್ಪ ಮಟ್ಟಿಗಾದರೂ ಅನುಕೂಲವಾಗುತ್ತದೆ ಪೂರ್ಣ ಅನುಕೂಲವಾಗುತ್ತದೆಂದು ಹೇಳುವುದಿಲ್ಲ. ಈ ಕಷ್ಟ ಪರಿಸ್ಥಿತಿಗೆ ತಕ್ಕಂತೆ ವಿದ್ಯುತ್ ಉತ್ಪಾದನೆ ಯಾಗುತ್ತಿಲ್ಲ. ಮೊದಲನೇ ಪ್ಲಾನ್‌ನಿಂದಲೂ ನೋಡಿಕೊಂಡು ಬಂದರೆ ವಿದ್ಯುಚ್ಛಕ್ತಿಗೆ ಸಾಕಾದಷ್ಟು ಪ್ರಯಾರಿಟಿಯನ್ನು ಕೊಟ್ಟಿಲ್ಲ. ಕೇಂದ್ರದಲ್ಲಾಗಲೀ ರಾಜ್ಯದಲ್ಲಾಗಲೀ ಇದಕ್ಕೆ ಪ್ರಯಾರಿಟಿ ಕೊಟ್ಟಿಲ್ಲ. ಪ್ಲಾನ್ ಔಟ್‌ಲೇ ಪ್ರಕಾರ ಎಷ್ಟು ವಿದ್ಯುಚ್ಛಕ್ತಿ ಬೇಕೋ ಅಷ್ಟು ವಿದ್ಯುಚ್ಛಕ್ತಿ ತಯಾರಾಗುತ್ತಿಲ್ಲ ಮತ್ತು ಅಷ್ಟು ಅಭಿವೃದ್ಧಿ ಕೂಡ ಆಗಿಲ್ಲ. ಅದರಿಂದಾಗಿ ಇಲ್ಲಿ ಅಭಾವವುಂಟಾಗಿದೆ. ಇದನ್ನು ಒಂದೆರಡು ದಿವಸದಲ್ಲಿ ಸರಿ ಮಾಡಲಿಕ್ಕೆ ಆಗುವುದಿಲ್ಲ. ಇದನ್ನು ಗಣನೆಯಲ್ಲಿಟ್ಟುಕೊಂಡು ನಮ್ಮ ರಾಜ್ಯ ಸರಕಾರ ಪ್ರಾಜೆಕ್ಟ್‌ಗಳನ್ನು ಕೈಗೊಂಡಿದೆ. ಕಾಳಿ ನದಿ ಸೆಕೆಂಡ್ ಸ್ಟೇಜ್ ೨೭೦ ಮೆಗಾವ್ಯಾಟ್, ಶರಾವತಿ ಸೆಕೆಂಡ್ ಸ್ಟೇಜ್, ೨೪೦ ಮೆಗಾವ್ಯಾಟ್, ರಾಯಚೂರು ಥರ್ಮಲ್ ಪ್ರಾಜೆಕ್ಟ್–೪೨೦ ಮೆಗಾವ್ಯಾಟ್, ವರಾಹಿ–೧೧೫ ಮೆಗಾವ್ಯಾಟ್ ಹೀಗೆ ಒಟ್ಟು ೧೦೪೫ ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಕಾರ್ಯ ಕ್ರಮ ಹಾಕಿಕೊಂಡಿದ್ದೇವೆ. ಇದು ಬೇರೆ ಬೇರೆ ಹಂತದಲ್ಲಿ ಇದೆ. ಇವೆಲ್ಲಾ ಮುಂಗಿದ ಮೇಲೆ ಪರಿಸ್ಥಿತಿ ಸರಿ ಹೋಗಬಹುದು ಕೇಂದ್ರ ಸರ್ಕಾರದವರು ನಮ್ಮ ರಾಜ್ಯದಲ್ಲಿ ಎರಡು ಮುಖ್ಯ ಪ್ರಾಜೆಕ್ಟ್‌ಗಳಾದ ಕೈಗಾ ಮತ್ತು ಮಂಗಳೂರು ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡಿದ್ದಾರೆ. ೨೪೨೦ ಮೆಗಾವ್ಯಾಟ್ ವಿದ್ಯುಚ್ಛಕ್ತಿ ಯನ್ನು ಉತ್ಪಾದನೆ ಮಾಡತಕ್ಕಂತಹ ಪ್ರಾಜೆಕ್ಟ್‌ಗಳು ಇವು. ನಮ್ಮ ರಾಜ್ಯದಲ್ಲಿ ಎಷ್ಟು ವಿದ್ಯುತ್ ತಯಾರು ಮಾಡುತ್ತೇವೆ ಅದರ ಒಂದೂವರೆಯಷ್ಟು ವಿದ್ಯುತ್ತನ್ನು ಈ ಎರಡು ಘಟಕಗಳು ತಯಾರು ಮಾಡುತ್ತವೆ. ಕೈಗಾವನ್ನು ಶುರು ಮಾಡಿದ್ದೇವೆ. ಮಂಗಳೂರಿನ ಪ್ರಾಜೆಕ್ಟ್‌ಗೆ ಲ್ಯಾಂಡ್ ಅಕ್ವಿಸಿಷನ್ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಮಧ್ಯೆ ಮಧ್ಯೆ ಅಡ್ಡಿ ಆಡಚಣೆಗಳು ಬರುತ್ತಿವೆ. ಈ ಎರಡೂ ಪ್ರಾಜೆಕ್ಟ್‌ಗಳು ಪರಿಪೂರ್ಣವಾದರೆ ವಿದ್ಯುಚ್ಛಕ್ತಿ ಬಗೆ ಮುಂದಕ್ಕೆ ತೊಂದರೆಯಾಗುವುದಿಲ್ಲ ಇದರಿಂದ ನೀರಾವರಿಗೆ ಮಾತ್ರ ತೊಂದರೆಯಾಗಿದೆ ಎಂದಲ್ಲ ಸಣ್ಣ ಕೈಗಾರಿಕೆಗಳಿಗೂ ಸ್ವಲ್ಪ ತೊಂದರೆಯಾಗಿದೆ. ವಿದ್ಯುಚ್ಛಕ್ತಿ ಅಭಾವ ಸರಿ ಹೋದರೆ ಮುಂದೆ ಅಷ್ಟು ತೊಂದರೆಯಾಗುವುದಿಲ್ಲ. ಹೆಚ್. ಪಿ. ಗೆ ಸಿಹಿ೦ ಪರ್ಸೆಂಟ್ ಎ. ಇ. ಹೆಚ್. ಗೆ ೯೦ ಪರ್ಸೆಂಟ್ ವಿದ್ಯುಚ್ಛಕ್ತಿ ಕಡಿತ ಇದೆ. ಮುಂದೆ ಮಳೆ ಬಾರದಿದ್ದರೆ ತೊಂದರೆಯಾಗುತ್ತದೆ. ಈಗ ತೆಗೆದುಕೊಂಡಿರುವ ಪ್ರಾಜೆಕ್ಟ್‌ಗಳು ಮುಗಿಯುವವರೆಗೆ ನವೆಂಬರ್‌ಗೆ ಸಂಪೂರ್ಣವಾಗಿ ಅನುಕೂಲವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಇದು ಮುಗಿದ ಮೇಲೆ ನಮ್ಮ ಪಂಪ್‌ಸೆಟ್‌ಗಳಿಗೆ ಮತ್ತು ಕೈಗಾರಿಕೆಗಳಿಗೆ ಎಷ್ಟು ಬೇಕೋ ಅಷ್ಟು ವಿದ್ಯುಚ್ಛಕ್ತಿ ಸಿಗುತ್ತದೆ. ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನ ಮಾಡಬಹುದು. ಆದರೆ ಅಲ್ಲಿಯವರೆಗೆ ತಾಳ್ಮೆಯಿಂದ ಇರಬೇಕಾಗುತ್ತದೆ. ಬೇಡಿಕೆ ಜಾಸ್ತಿ ಇದ್ದು ಉತ್ಪನ್ನ ಕಡಿಮೆ ಈಗ ಇರುವುದರಿಂದ ಈ ಕಷ್ಟ ಪರಿಸ್ಥಿತಿ ಉಂಟಾಗಿದೆ ದಯವಿಟ್ಟು ತಡೆದುಕೊಳ್ಳಬೇಕೆಂದು ವಿನಂತಿಸುತ್ತೇನೆ. ನಮ್ಮ ಸ್ನೇಹಿತರು ಮಾತನಾಡುತ್ತಾ ಇದಕ್ಕೆ ಸದನ ಸಮಿತಿಯನ್ನು ರಚನೆ ಮಾಡಿ ಎಂದು ಹೇಳಿದರು ಸದನ ಸಮಿತಿ ರಚನೆಯಾಗಿ ಸರಕಾರಕ್ಕೆ ವರದಿ ಕೊಟ್ಟರೆ ಅನುಕೂಲವಾಗುವುದಿಲ್ಲ. ಉತ್ಪನ್ನ ಕಡಿಮೆ ಬೇಡಿಕೆ ಜಾಸ್ತಿಯಾಗುತ್ತಿದೆ ಇದು ಸರಿ ಹೋಗುವವರೆಗೆ ಪರಿಸ್ಥಿತಿ ಉತ್ತಮವಾಗುವುದಿಲ್ಲ. ೧೫೦ ಕೋಟಿ ರೂಪಾಯಿಯನ್ನು ವಿದ್ಯುಚ್ಛಕ್ತಿ ಮಂಡಲಿಗೆ ಕೊಟ್ಟರೆ ಅನುಕೂಲವಾಗುತ್ತದೆಂದು ಮಾನ್ಯ ಸ್ನೇಹಿತರು ಹೇಳಿದರು ದುಡ್ಡು ಕೊಟ್ಟರೆ ಲೈನ್ ಎಳೆಯಬಹುದು ಆದರೆ ವಿದ್ಯುಚ್ಛಕ್ತಿ ಇಲ್ಲದಿದ್ದರೆ ಏನು ಪ್ರಯೋಜನವಾದೀತು, ಇದರಿಂದ

ಯಾವ ವಿಧವಾದ ಅನುಕೂಲವಾಗುವುದಿಲ್ಲ. ಮಂಡಲಿಯ ಅಧ್ಯಕ್ಷರ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಬರೀ ಹಣ ಕೊಡುವುದರಿಂದ ಪರಿಸ್ಥಿತಿ ಉತ್ತಮವಾಗುವುದಿಲ್ಲ. ಯಾವುದು ನಿಜವಾದ ತೊಂದರೆ ಇದೆ ಅದನ್ನು ಸರಿಪಡಿಸಬೇಕು.

† ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ, ೧೫೦ ಕೋಟಿ ರೂಪಾಯಿಗಳು ಬೇಕಾಗಿರತಕ್ಕದ್ದು ಹೊಸ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೆ ಅಲ್ಲ. ನನ್ನ ಹತ್ತಿರ ಎಲ್ಲಾ ಮಾಹಿತಿ ಇದೆ. ಈಗಿರತಕ್ಕ ಟ್ರಾನ್ಸ್‌ಮಿಷನ್ ಲೈನ್ಸ್ ಏನು ಇದೆ, ಅದರಲ್ಲಿ ಕೆಲವು ಕಡೆ ೭೨ ಪರ್ಸೆಂಟ್ ಲಾಸಸ್ ಆಗುತ್ತಿದೆ. ಕರೆಂಟ್ ಉತ್ಪತ್ತಿ ಬಗ್ಗೆ ಈಗಿರತಕ್ಕದ್ದು ೭೨ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸಸ್ ಆಗುತ್ತಿದೆ. ನ್ಯಾಷನಲ್ ಆವರೇಜ್ ೨೦ರಿಂದ ೨೧ಪರ್ಸೆಂಟ್ ಲೈನ್ ಲಾಸಸ್ ಇದೆ ಎಂದು ಅವರು ಹೇಳುತ್ತಾರೆ, ಅದಕ್ಕೆ ಬದಲಾಗಿ ೭೨ ಪರ್ಸೆಂಟ್ ಲಾಸಸ್ ಆಗುತ್ತಿದೆ. ಇದು ಯಾವ ರೀತಿ ಆಗುತ್ತಿದೆ. ಎಲ್ಲಿ ಸಬ್‌ಸ್ಟೇಷನ್ ಹಾಕಬೇಕು. ಅಲ್ಲಿ ಹಾಕಲಿಲ್ಲ. ಯಾವ ಕೆಪಾಸಿಟಿ ಲೈನ್ ಹಾಕಬೇಕಾಗಿದೆ, ಆ ಕೆಪಾಸಿಟಿ ಲೈನ್ ಹಾಕದಿರುವುದರಿಂದ ಕಡಿಮೆ ಕೆಪಾಸಿಟಿ ಆಗಿದೆ, ಹೆಚ್ಚಿನ ಕರೆಂಟ್ ಇದರಿಂದ ತೆಗೆದುಕೊಳ್ಳುತ್ತಿದೆ. ಆದ್ದರಿಂದ ಟ್ರಾನ್ಸ್‌ಮಿಷನ್ ಲಾಸಸ್ ಎಲ್ಲಿ ಆಗುತ್ತಿದೆ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಾನು ಟೆಕ್ನಿಕಲ್ ಡೀಟೇಲ್ಸ್‌ಗೆ ಹೋಗುವುದಿಲ್ಲ. ಈಗಿರತಕ್ಕ ಸಿಸ್ಟಂ ಏನು ಇದೆ, ಅದನ್ನು ಇಂಪ್ರೂವ್ ಮಾಡುವುದಕ್ಕೆ ೧೫೦ ಅಥವಾ ೧೭೦ ಕೋಟಿ ಅದನ್ನು ಸ್ಟ್ರಾಂಡರ್ಡೈಸ್ ಮಾಡುವುದಕ್ಕೆ ಎಷ್ಟು ಹಣಬೇಕಾಗುತ್ತದೆ. ನೀವು ಹೇಳಿದ ರೀತಿ ಉತ್ಪಾದನೆ ಮಾಡುವುದು, ಅದು ಲಾಂಗ್ ರೇಂಜ್ ಪ್ರೋಗ್ರಾಮ್ ಹಣ ಬೇಕಾಗಿರುವುದು ತದನಂತರ ಈ ಆಸ್ಪೆಕ್ಟ್‌ಗೆ. ಇದರ ಕಡೆಗೆ ಗಮನ ಕೊಟ್ಟರೆ ಒಳ್ಳೆಯದು. ಟ್ರಾನ್ಸ್‌ಮಿಷನ್ ಲಾಸಸ್ ಕೆಲವು ಕಡೆ ಆಗುತ್ತಿದೆ. ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆಯೇ. ಇದರ ಬಗ್ಗೆ ತಾವು ಏನು ಹೇಳುತ್ತೀರಿ.

ಶ್ರೀ ಎಂ. ರಾಜಶೇಖರಮೂರ್ತಿ,—೭೨ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸಸ್ ಎಂದು ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನಾನು ಒಪ್ಪುವುದಕ್ಕೆ ತಯಾರಿಲ್ಲ. ೨೧ರಿಂದ ೨೩ ಪರ್ಸೆಂಟ್ ಲಾಸಸ್ ಇದೆ. ಅದು ಆಲ್ ಇಂಡಿಯಾ ಆವರೇಜ್ We are examining as to what extent we can cut down the transmission losses. Our Department is trying its best to reduce the transmission losses and that is why I have stated in my reply that the existing lines are strengthened.

ಶ್ರೀ ಸಿ. ಬೈರೇಗೌಡ.—ಅಷ್ಟು ಸುಲಭವಾಗಿ ಆಗುವುದಿಲ್ಲ. ಮುಖ್ಯವಾದ ಪ್ರಶ್ನೆ.....

ಅಧ್ಯಕ್ಷರು.—ಇಲ್ಲಿಯೇ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಿ ಎಂದು ಹೇಳುತ್ತಿದ್ದೀರಾ?

ಶ್ರೀ ಸಿ. ಬೈರೇಗೌಡ —ಕೆಲವು ಸಂದರ್ಭದಲ್ಲಿ ನಾವು ಹೇಳಲೇಬೇಕಾಗುತ್ತದೆ. ಇದು ಬದುಕು ಮತ್ತು ಜೀವನದ ಪ್ರಶ್ನೆ. ನಾವು ಬದುಕಬೇಕಾಗಿರತಕ್ಕದ್ದು ಮುಖ್ಯವಾದ ಪ್ರಶ್ನೆ. ಕುಡಿಯುವ ನೀರನ್ನು ನಾವು ಹೇಗೆ ಅವಲಂಬಿಸಬೇಕಾಗಿದೆಯೋ ಹಾಗೆಯೇ ವಿದ್ಯುತ್ತನ್ನು ಅವಲಂಬಿಸಬೇಕಾಗಿದೆ. ಅನೇಕ ಹಳ್ಳಿಗಳಲ್ಲಿ ಇವೊತ್ತಿನ ದಿವಸ ಸಣ್ಣ ಸಣ್ಣ ಕೆರೆಕುಂಟೆಗಳಲ್ಲಿ ನೀರು ಇಲ್ಲ ನಾವು ಪಂಪ್ ಮಾಡಿ, ಅಥವಾ ಬೋರ್‌ವೆಲ್ ಹಾಕಿ ನೀರು ಕೊಡುತ್ತಿದ್ದೇವೆ. ಕರೆಂಟ್ ಇಲ್ಲದಿದ್ದರೆ ಸಾಯತಕ್ಕ ಪರಿಸ್ಥಿತಿ ಇದೆ. ನಮ್ಮ ಜಿಲ್ಲೆಯಲ್ಲಿ ವಿದ್ಯುತ್ ಜೀವನ್ಮರಣ ಪ್ರಶ್ನೆ ಆಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಸುತ್ತಿದ್ದೇನೆ. ಇವೊತ್ತು ೭೨ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸಸ್ ಇಲ್ಲವೆಂದು ಮಾನ್ಯ ಮಂತ್ರಿಗಳೇ ಹೇಳುತ್ತಿದ್ದಾರೆ. ನನ್ನ ಹತ್ತಿರ ಮಾಹಿತಿ ಇದೆ. ನನ್ನ ಕ್ಷೇತ್ರದಲ್ಲಿ ಸುಮಾರು ಒಂದು ಒಂದೂವರೆ ವರ್ಷದ ಹಿಂದೆಯೇ ಒಂದು ಲೈನ್ ಎಸ್ಟಿಮೇಟ್ ಮಾಡಿದ್ದಾರೆ, ಇದರಲ್ಲಿ ೭೨ ಪರ್ಸೆಂಟ್ ಲಾಸ್ ಇದೆ ಎಂದು ಕೆ.ಇ.ಬಿ ವರದಿಯಲ್ಲಿ ಇದೆ. ಸಬ್ ಸ್ಟೇಷನ್ ಆಗಿದೆ ಪರಿಸ್ಥಿತಿ ಸುಧಾರಣೆ ಆಗಿದೆ, ಇಲ್ಲವೆಂದು ಹೇಳುವುದಿಲ್ಲ. ನನ್ನ ಕ್ಷೇತ್ರದಲ್ಲಿ ತಳೆದವಾರ ಎಂಬ ಊರು ಇದೆ, ಚಿಂತಾಮಣಿಯಿಂದ ೧೦ ಮೈಲಿ. ತಳೆದವಾರಕ್ಕೆ ಪವರ್ ಬರಬೇಕಾದರೆ ೧೦೦ ಕಿಲೋ ವೀಟರ್ ಲೈನ್ ಬರುವಾಗ, ಅದನ್ನು ಎಸ್ಟಿಮೇಟ್ ಮಾಡಿಸಿ. ವರದಿಯನ್ನು ತಾವು ತರಿಸಿ ಮಾಡಿ ವಿವರವಾಗಿ ಇದನ್ನು ಯೋಚನೆ ಮಾಡಬೇಕಾಗುತ್ತದೆ. ಆದಕ್ಕೋಸ್ಕರ ಒಂದು ಸದನದ ಸಮಿತಿ ಮಾಡಿ ವಿವರವನ್ನು ತರಿಸಿ. ಸರ್ಕಾರದ ಅಧಿಕಾರಿಗಳನ್ನು ಅಲ್ಲಿ ಕಳಿಸಿ, ಅವರು ವರದಿ ಕೊಡುತ್ತಾರೆ. ನನ್ನ ಜೊತೆ ನಿಮ್ಮ ಅಧಿಕಾರಿಗಳನ್ನು ಕಳಿಸಿ ಎಷ್ಟು ಲಾಸ್ ಆಗುತ್ತಿದೆ ಎಂದು ನಾನು ತೋರಿಸಿಕೊಡುತ್ತೇನೆ ನಾವು ಸರ್ಕಾರಕ್ಕೆ ವೃಥಾ ಖರ್ಚು ಮಾಡಿಸಬೇಕೆಂಬ ದೃಷ್ಟಿಯಿಂದ ಹೇಳುತ್ತಿಲ್ಲ. ಈ ದೃಷ್ಟಿಯಿಂದ ಸದನದ ಸಮಿತಿ ಆಗಬೇಕೆಂದು ಹೇಳುತ್ತಿದ್ದೇನೆ. ಇನ್‌ಡೆಪ್ತ್ ಮಾಹಿತಿ ಸರ್ಕಾರಕ್ಕೆ ಇದರ ಬಗ್ಗೆ ಮಾಹಿತಿ ಇರಲಿ. ಲಾಸ್ ಆಗಿದೆ ಇಲ್ಲವೆಂದು ಅವರು ಹೇಳುತ್ತಿದ್ದಾರೆ ಕೆಲವು ಜಿಲ್ಲೆಗಳಲ್ಲಿ ಇರತಕ್ಕ ಅಪ್ಲಿಕೇಶನ್‌ಗಳು

ಸುವಾರು ಒಂದು ಒಂದೂವರೆಯಷ್ಟು ಬೇಡಿಕೆಗಿಂತ ಜಾಸ್ತಿ ಇದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ವಿದ್ಯುತ್ ಉತ್ಪಾದನೆಗಿಂತ ಒಂದು ಒಂದೂವರೆಯಷ್ಟು ಹೆಚ್ಚು ಬೇಡಿಕೆ ಇದೆ ಎಂದು ಅವರು ಒಪ್ಪಿಕೊಂಡಿದ್ದಾರೆ. ಆದುದರಿಂದ ವಿಶೇಷವಾಗಿ ನಮ್ಮ ಜಿಲ್ಲೆಗಳಿಂದ ಬಂದಿರತಕ್ಕ ಅರ್ಜಿಗಳಿಗೆ ಗಮನ ಕೊಟ್ಟು ಇನ್ನು ೩ ತಿಂಗಳು, ೬ ತಿಂಗಳ ಅವಧಿಯೊಳಗೆ ಪವರ್ ಕನೆಕ್ಷನ್ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತಾರೆಯೇ? ಇದರ ಬಗ್ಗೆ ನನ್ನ ಒಂದು ಸಲಹೆ ಇದೆ ಏನೆಂದರೆ ಹೈಟೆನ್‌ಷನ್ ಪವರ್‌ಗೆ ೫೦ ಪರ್ಸೆಂಟ್ ಪವರ್‌ಕಟ್ ವಿಧಿಸಿದ್ದೀರಿ. ಅದನ್ನು ಒಂದಿಷ್ಟ ಹೆಚ್ಚಿಸಿದರೂ ಚಿಂತೆಯಿಲ್ಲ ಇನ್ನೊಂದಿಷ್ಟು ಪವರ್‌ಕಟ್ ಅವರಿಗೆ ವಿಧಿಸಿದರೂ ಚಿಂತೆಯಿಲ್ಲ. ಅದರಲಿ ಸೇವ್ ಆಗುವಂಥ ಪವರನ್ನು ನಮ್ಮ ಕೆಲವು ಜಿಲ್ಲೆಗಳಿಗೆ ಕೊಡಬೇಕು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ನೀರಾವರಿಯಿಲ್ಲ, ಸಣ್ಣ ಪ್ರಮಾಣದ್ದಾಗಲಿ ದೊಡ್ಡ ಪ್ರಮಾಣದ್ದಾಗಲಿ ಯಾವುದೇ ನೀರಾವರಿಯಿಲ್ಲ ಎನ್ನುವುದನ್ನು ಅವರು ಒಪ್ಪಿದ್ದಾರೆ. ಆದ್ದರಿಂದ ನಮ್ಮ ರಕ್ಷಣೆಗೆ ಬರುವುದು ಅವರ ಕರ್ತವ್ಯ ಹೈಟೆನ್‌ಷನ್‌ನವರಿಗೆ ಪವರ್‌ಕಟ್ ಹೆಚ್ಚು ಮಾಡಿ, ಅದರಿಂದ ಸೇವ್ ಆಗುವ ವಿದ್ಯುತ್ತನ್ನು ಬಯಲು ಸೀಮೆಯ ಜಿಲ್ಲೆಗಳಿಗೆ ಕೊಡತಕ್ಕಂಥ ಕೆಲಸವನ್ನು ಮಾಡುತ್ತಾರೆಯೇ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಎಂ. ಪಿ. ವೆಂಕಟೇಶ್.—ಬ್ಯಾಂಕ್‌ನವರು ಬಾವಿ ತೆಗೆಯುವುದಕ್ಕೆ ಕೊಟ್ಟ ಸಾಲವನ್ನು ವಸೂಲು ಮಾಡುವುದಕ್ಕೆ ಹೋಗುತ್ತಾ ಇದ್ದಾರೆ. ಬಾವಿ ಬಿದ್ದುಹೋಗಿದೆ. ಆದ್ದರಿಂದ ಬಾವಿ ಸಾಲದ ಬಡ್ಡಿಯನ್ನು ಮನ್ನಾಮಾಡಿ ಸಾಲವನ್ನು ನಿಧಾನವಾಗಿ ವಸೂಲು ಮಾಡುವುದಕ್ಕೆ ಹೇಳಿ ಸ್ವಾಮಿ. ರೈತರಿಗೆ ಇದು ಒಹಳ ಮುಖ್ಯವಾದ ಪ್ರಶ್ನೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಬ್ಯಾಂಕ್ ಸಾಲಕ್ಕೂ ಈ ಕಾಲಿಂಗ್ ಅಟೆನ್‌ಷನ್‌ಗೂ ಯಾವ ವಿಧವಾದ ಸಂಬಂಧವಿಲ್ಲ. ಮಾನ್ಯ ಬೈರೇಗೌಡರು ೭೨ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ಆಗುತ್ತಿದೆ ಎಂದು ಹೇಳಿದ್ದಾರೆ. ನಾನು ವೆರಿಫೈ ಮಾಡಿದ್ದೇನೆ ೭೨ ಪರ್ಸೆಂಟ್ ಟ್ರಾನ್ಸ್‌ಮಿಷನ್ ಲಾಸ್ ಇಲ್ಲ, ಇರುವುದು ೨೧ ರಿಂದ ೨೩ ಪರ್ಸೆಂಟ್. ನನಗೆ ಅನುಮಾನವಿದೆ, ಟ್ರಾನ್ಸ್‌ಮಿಷನ್ ಲಾಸ್ ೭೨ ಪರ್ಸೆಂಟ್ ಎಂದು ಅವರು ಏನು ಹೇಳುತ್ತಾರೆ ಆದರಲ್ಲಿ ತೆಫ್ಟ್ ಏನಾದರೂ ಸೇರಿದೆಯೇ ಎಂದು.

ಶ್ರೀ ಸಿ. ಬೈರೇಗೌಡ.—ಹೈಟೆನ್‌ಷನ್‌ನವರಿಗೆ ಈಗ ೫೦ ಪರ್ಸೆಂಟ್ ಪವರ್‌ಕಟ್ ವಿಧಿಸಿದ್ದೀರಿ. ಅದನ್ನು ಇನ್ನೂ ಸ್ವಲ್ಪ ಹೆಚ್ಚುಮಾಡಿ ಅದರಲ್ಲಿ ಸೇವ್ ಆಗತಕ್ಕ ಪವರನ್ನು ನಮಗೆ ಕೊಡಿ ಎಂದು ನಾನು ಸಲಹೆ ಮಾಡಿದೆ. ನಮಗೆ ೨೪ ಗಂಟೆಯಶ್ಚೇಜ್ಯವಾಗಿ ಕರೆಂಟ್ ಕೊಡಿ ಎಂದು ಹೇಳುವುದಿಲ್ಲ. ನಮಗೆ ಪವರ್ ಕೊಡತಕ್ಕ ಅವಧಿಯನ್ನು ಹೆಚ್ಚಿಸಿ ಆ ಅವಧಿಯಲ್ಲಿ ಕರೆಕ್ಟ್ ಓಲ್ಟೇಜ್‌ನಲ್ಲಿ ಪವರ್ ಕೊಡುವಂತೆ ವ್ಯವಸ್ಥೆ ಮಾಡಿ. ಈಗಿರತಕ್ಕಂಥ ಅರ್ಜಿಗಳಿಗೆ ಬೇಗ ಕನೆಕ್ಷನ್ ಕೊಡಬೇಕು, ೩ ತಿಂಗಳು ಅಥವಾ ೬ ತಿಂಗಳ ಅವಧಿಯಲ್ಲಿ ಪವರ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿರಾ?

ಶ್ರೀ ಎಂ. ರಾಜಶೇಖರ ಮೂರ್ತಿ — ಎಲ್ಲಿಯಂತನಕ ಪವರ್ ಶಾರ್ಟೇಜ್ ಇರತ್ತದೆ ಅಲ್ಲಿಯತನಕ ಈ ಪವರ್ ಪ್ಲಕ್ಟ್ಯುಯೇಷನ್ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಏಡಣೆಂದರೆ, ಕೈಗಾರಿಕೆಗಳಿಗೆ ೫೦ ಪರ್ಸೆಂಟ್ ಪವರ್‌ಕಟ್ ಏನಿದೆ ಅದನ್ನು ಜಾಸ್ತಿ ಮಾಡುವುದಕ್ಕೆ ಆಗುವುದಿಲ್ಲ. ನಾನು ಇದರ ಬಗ್ಗೆ ಕಮಿಟ್‌ಮೆಂಟ್ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. I will get this matter examined.

ಶ್ರೀ ಸಿ. ಬೈರೇಗೌಡ.—ರೈತರ ಬಗ್ಗೆ ಸರ್ಕಾರ ಉದ್ದಟತನವನ್ನು ಧೋರಣೆಯನ್ನು ತೋರಿಸುತ್ತಾ ಇದೆ. ಹೈಟೆನ್‌ಷನ್ ಪವರ್‌ಕಟ್ ಹೆಚ್ಚಿಗೆಮಾಡಿ ರೈತರಿಗೆ ಹೆಚ್ಚು ಪವರ್ ಕೊಡಿ ಅಂದರೆ ಅದು ಆಗುವುದಿಲ್ಲ ಎಂದರೆ ನಾವು ಎಲ್ಲಿ ಹೋಗಬೇಕು, ಇವತ್ತಿನದಿವಸ ಕುಡಿಯುವುದಕ್ಕೆ ನೀರಿಲ್ಲದೆ ಇರತಕ್ಕಂಥ ಪರಿಸ್ಥಿತಿ ನಮಗೆ ಉದ್ಭವವಾಗಿದೆ ಮಾನ್ಯ ವೆಂಕಟೇಶ್‌ರವರು ಕೇಳಿದ ಪ್ರಶ್ನೆಗೆ ಬಾವಿ ಸಾಲಕ್ಕೂ ಕಾಲಿಂಗ್ ಅಟೆನ್‌ಷನ್‌ಗೂ ಸಂಬಂಧವಿಲ್ಲ ಎಂದು ಹೇಳುತ್ತಾ ಇದ್ದಾರೆ. ಎರಡೂವರೆ ವರ್ಷವಾದರೂ ಪವರ್ ಕನೆಕ್ಷನ್ ಕೊಡದೇಹೋದರೆ ಹೇಗೆ, ಅದಕ್ಕೆ ಬಡ್ಡಿಯನ್ನು ಹಾಕುತ್ತಾರೆ, ಪವರನ್ನು ಉಪಯೋಗಿಸಿಕೊಳ್ಳದೇ ಇದ್ದರೂ ಕೂಡ, ಬೋರ್‌ವೆಲ್ ಉಪಯೋಗಿಸಿಕೊಳ್ಳದೇ ಇದ್ದರೂ ಸಾಲದ ಹಣಕ್ಕೆ ಬಡ್ಡಿ ಹಾಕಿದರೆ ಅದನ್ನು ಯಾವರೀತಿ ಕೊಡಬೇಕು. ಪ್ರಾ ವಾಪಸ್ ಕೊಡುವುದನ್ನು ರೀಷೆಡ್ಯೂಲ್ ಮಾಡುವುದರ ಜೊತೆಗೆ ಬೋರ್‌ವೆಲ್ ಉಪಯೋಗಿಸಿಕೊಳ್ಳಲಾಗದಕ್ಕೆ ಎಲ್ಲಿಯವರೆಗೆ ಸಾಧ್ಯವಿಲ್ಲವೋ ಅಲ್ಲಿಯವರೆಗೆ ಬಡ್ಡಿ ವಸೂಲು ಮಾಡುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ ಅಂದರೆ ಇವತ್ತು ಸರ್ಕಾರ ಮಾಡಿದಂಥ ತಪ್ಪಿಗೆ ರೈತ ಬಡ್ಡಿ ಕೊಡಬೇಕಾದ ಪರಿಸ್ಥಿತಿ ಬಂದಿದೆ. ಹೀಗಾದರೆ ಇವತ್ತಿನದಿವಸ ರೈತರ ಗತಿ ಏನಾಗಬೇಕು? ಇಷ್ಟು ಸುಲಭವಾಗಿ ನಾವು ಬಿಡುವುದಕ್ಕೆ ತಯಾರಿಲ್ಲ. ಇವತ್ತು ರಾಜ್ಯದಲ್ಲಿ ಪ್ರಬಲವಾದಂಥ ಲಾ ಅಂಡ್ ಆರ್ಡರ್ ಸಿಚುಯೇಷನ್ ಡೆವಲಪ್ ಆಗುತ್ತಿದೆ. ರೈತರು ತಾಳ್ಮೆ ಕಳೆದುಕೊಳ್ಳುತ್ತಿದ್ದಾರೆ, ರೈತ ಸಮುದಾಯದ ತೀವ್ರ

ಪ್ರತಿಭಟನೆಯನ್ನು ನೀವು ಎದುರಿಸಬೇಕಾಗುತ್ತದೆ. ಇದರ ಬಗ್ಗೆ ಮೊದಲೇ ಎಚ್ಚರಿಕೆ ಕೊಡುತ್ತಿದ್ದೇನೆ ಪವರ್ ಕಟ್ ಜಾಸ್ತಿ ಮಾಡುವುದಕ್ಕಾಗುವುದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು.—ನೀವು ಕೊಡತಕ್ಕ ಎಚ್ಚರಿಕೆಯನ್ನು ಪುನರುಚ್ಚಾರ ಮಾಡುತ್ತಿರುವುದನ್ನು ಸರ್ಕಾರ ದವರು ಗಮನಿಸಿದ್ದಾರೆ, ನೀವು ಎತ್ತಿರತಕ್ಕ ಮಹತ್ವದ ಪ್ರಶ್ನೆಯ ಅರಿವು ನನಗೆ ಇದೆ. ಸರ್ಕಾರದ ಮುಂದಿರತಕ್ಕ ತೊಂದರೆಗಳನ್ನು ಕೂಡ ಅವರು ಹೇಳಿದ್ದಾರೆ. ಬೇಡಿಕೆ ಮತ್ತು ಉತ್ಪಾದನೆಯ ಮಧ್ಯೆ ಕಳೆದ ಹತ್ತಾರು ವರ್ಷಗಳಿಂದ ಆಜಗಜಾಂತರ ವ್ಯತ್ಯಾಸ ಬೆಳೆದುಕೊಂಡು ಬಂದಿರುವುದೇ ಈ ಎಲ್ಲಾ ತೊಂದರೆಗಳಿಗೆ ಕಾರಣವಾಗಿದೆ. ಈ ಸಮಸ್ಯೆಯ ತೀವ್ರತೆಯನ್ನು ನಾವೆಲ್ಲರೂ ಕುಳಿತು ಯೋಚನೆ ಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ.—ಅದಕೋಸ್ಕರವೇ ನಾನು ಸದನದ ಸಮಿತಿ ಮಾಡಿ ಎಂದು ಹೇಳಿದ್ದೆ. ಹೈಟೆನ್‌ಷನ್ ಪವರ್‌ಕಟ್ ಹೆಚ್ಚು ಮಾಡಿ ಬಯಲು ಸೀಮೆಯ ರೈತರ ಪಂಪುಸೆಟ್ಟುಗಳಿಗೆ ಕರೆಂಟ್ ಕೊಡಿ ಉತ್ಪಾದನೆ ಜಾಸ್ತಿಯಾಗುತ್ತದೆ. ಹೊಸ ಪಂಪು ಸೆಟ್ಟುಗಳಿಗೆ ಕಳೆದ ಎರಡು ವರ್ಷಗಳಿಂದ ಕರೆಂಟ್ ಕೊಡದೇ ಹೋದರೆ ನಮ್ಮ ಗತಿ ಏನು? ನಾವು ಎಲ್ಲಿಗೆ ಹೋಗಬೇಕು? ಇದರ ಬಗ್ಗೆ ಮಾನ್ಯ ಮಂತ್ರಿಗಳು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪುನರ್ ಪರಿಶೀಲನೆ ಮಾಡುವುದಕ್ಕೆ ಸಾಧ್ಯವೆ?

ಶ್ರೀ ಎಂ. ರಾಜಶೇಖರ ಮೂರ್ತಿ.—ಮಾನ್ಯ ಬೈರೇಗೌಡರಿಗೆ ರೈತರ ಬಗ್ಗೆ ಎಷ್ಟು ಸಹಾನುಭೂತಿ ಇದೆಯೋ ಅದಕ್ಕಿಂತ ಹೆಚ್ಚು ನಮ್ಮ ಸರ್ಕಾರಕ್ಕೆ ಸಹಾನುಭೂತಿ ಇದೆ. ಸರ್ಕಾರದವರು ರೈತರಿಗೆ ಏನೂ ಮಾಡಿಲ್ಲ ಎನ್ನುವ ಧಾಟಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ನಾವು ಅಧಿಕಾರಕ್ಕೆ ಬಂದು ೧೦ ದಿವಸ ಆಗಿದೆ. ಕಳೆದ ಆರು ವರ್ಷಗಳಿಂದ ಅವರು ಇಲ್ಲಿ ಕುಳಿತಿದ್ದರು, ಅವರು ಮೊದಲು ಏತಕ್ಕೆ ಮಾಡಲಿಲ್ಲ.

ಶ್ರೀ ಸಿ. ಬೈರೇಗೌಡ.—ಬಹಳ ಸಂತೋಷ. ಏನು ಮಾಡಿದ್ದೀವೆಂದು ಹೇಳುತ್ತೇನೆ. ಆರು ವರ್ಷದಿಂದ ನಾವು ಏನೂ ಮಾಡದೇ ಇರುವುದಕ್ಕೆ ೧೭೭ಜನರನ್ನು ಆರಿಸಿ ಕಳುಹಿಸಿದ್ದಾರೆ. ನೀವು ಏನು ಮಾಡುತ್ತೀರಿ ಅದನ್ನು ಹೇಳಿ.

ಅಧ್ಯಕ್ಷರು.—ಅವರು ಬಂದು ಕೇವಲ ೧೦ ದಿವಸಗಳಾಗಿವೆ. ಏನು ಮಾಡುತ್ತಾರೆಂಬುದನ್ನು ಕಾದು ನೋಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ರೈತರ ವಿಚಾರದಲ್ಲಿ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸಭೆಯಿಂದ ನಾವು ಹೊರಗೆ ಹೋಗುತ್ತೇವೆ.

(ಜನತಾ ಪಕ್ಷದ ಇಬ್ಬರು ಸದಸ್ಯರು ಸಭೆಯಿಂದ ನಿರ್ಗಮಿಸಿದರು.)

ನಿಯಮ ೩೩೪ರ ಮೇರೆಗೆ

೧ ದಿನಾಂಕ ೯-೧೨-೧೯೮೯ರಂದು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಕರ್ನಾಟಕ-ಮಹಾರಾಷ್ಟ್ರದ ಗಡಿ ವಿವಾದ ಬಗೆಹರಿದಿಲ್ಲವೆಂದು ಪತ್ರಿಕಾ ಹೇಳಿಕೆ ನೀಡಿರುವುದು

ಅಧ್ಯಕ್ಷರು.—ಈಗ ನಿಯಮ ೩೩೪ರ ಮೇರೆಗೆ ಪ್ರಸ್ತಾಪ.

ಶ್ರೀ ಶಿವಾನಂದ ಎಸ್. ಕೌಜಲಗಿ (ಬೈಲಹೊಂಗಲ).—ಮಹಾರಾಷ್ಟ್ರದ ಮುಖ್ಯಮಂತ್ರಿಗಳು ದಿನಾಂಕ ೯-೧೨-೧೯೮೯ರಂದು ಪತ್ರಿಕಾ ಹೇಳಿಕೆಯನ್ನು ನೀಡಿ ಇನ್ನೂ ಕರ್ನಾಟಕ-ಮಹಾರಾಷ್ಟ್ರ ಗಡಿ ವಿವಾದ ಬಗೆಹರಿದಿರುವುದಿಲ್ಲ ಮತ್ತು ಮಹಾಜನ್ ವರದಿಯನ್ನು ಒಪ್ಪುವುದಿಲ್ಲವೆಂದೂ, ಜನಗಣತಿ ಪ್ರಕಾರ ಬೆಳಗಾಂ ಗಡಿ ವಿವಾದವನ್ನು ಬಗೆಹರಿಸಬೇಕೆಂದು ಹೇಳಿರುತ್ತಾರೆ.

ಈ ಮಹಾರಾಷ್ಟ್ರದ ಮುಖ್ಯಮಂತ್ರಿಗಳವರ ಹೇಳಿಕೆಯಿಂದ ಗಡಿ ಭಾಗಗಳಲ್ಲಿ ವಾಸಿಸುತ್ತಿರುವ ಕನ್ನಡಿಗರಿಗೆ ಭಯವುಂಟಾಗಿದೆ. ಆದ ಕಾರಣ, ಹೊಸ ಸರ್ಕಾರದ ನೀತಿಯನ್ನು ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಈ ಸಭೆಯಲ್ಲಿ ಪ್ರಕಟಿಸಿ ಗಡಿ ಭಾಗದಲ್ಲಿರುವ ಕನ್ನಡಿಗರ ಭಯವನ್ನು ನಿವಾರಿಸ ಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಿಗೆ ಕೋರುತ್ತೇನೆ.